ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು, ನೆಮ್ಮದಿ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ.

ಆ) ನೆಮ್ಮದಿ ಯೋಜನೆಯನ್ನು ರಾಜ್ಯಾದ್ಯಂತ ಪ್ರಾರಂಭಿಸಲಾಗಿದೆ. ಈವರೆಗೆ 752 ಗ್ರಾಮೀಣ ಟಿಲಿಕೇಂದ್ರಗಳನ್ನು ಹೋಬಳಿ/ಗ್ರಾಮ ಮಟ್ಟದಲ್ಲಿ ಜಾರಿಗೊಳಿಸಲಾಗಿದೆ. ಕರ್ನಾಟಕದಲ್ಲಿ ಒಟ್ಟು 749 ಹೋಬಳಿಗಳಿದ್ದು ಅವುಗಳಲ್ಲಿ 742 ಹೋಬಳಿಗಳಲ್ಲಿ ಹಾಗೂ ಇನ್ನಿತರೆ 10 ಗ್ರಾಮಗಳಲ್ಲಿ ನೆಮ್ಮದಿ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಇ) ನೆಮ್ಮದಿ ಯೋಜನೆಯು ಬಸವನಬಾಗೇವಾಡಿ ತಾಲ್ಲೂಕಿನ ಮನಗೂಳಿ ಗ್ರಾಮದಲ್ಲಿ ಪ್ರಾರಂಭಿಸಲಾಗಿದೆ. ಮುತ್ತಗಿ ಗ್ರಾಮದಲ್ಲಿ ನೆಮ್ಮದಿ ಯೋಜನೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಈಗ ಸರ್ಕಾರದ ಮುಂದೆ ಇರುವುದಿಲ್ಲ.

ಈ) ಉತ್ತರ ಸಂಖ್ಯೆ (ಇ)ನ್ನು ಗಮನಿಸಿ.

ಉ) ನೆಮ್ಮದಿ ಯೋಜನೆಯು ಮನಗೂಳಿ ಗ್ರಾಮದಲ್ಲಿ 19.05.2007 ರಂದು ಪ್ರಾರಂಭಗೊಂಡಿದೆ.

ಹೊಸದಾಗಿ ಭೂಮಿ ಕೇಂದ್ರಗಳನ್ನು ತೆರೆಯುವುದು

841(1365) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಇರತಕ್ಕಂತಹ ಭೂಮಿ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಹೊಸದಾಗಿ ಭೂಮಿ ಕೇಂದ್ರಗಳನ್ನು ತೆರೆಯುವ ಉದ್ದೇಶ ಸರ್ಕಾರದ ಮುಂದಿದೆಯೇ;

ಇ) ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಭೂಮಿ ಕೇಂದ್ರಗಳನ್ನು ತೆರೆಯಲಾಗುವುದು;

ಈ) ಬಸವನಬಾಗೇವಾಡಿ ತಾಲ್ಲೂಕಿನ ಕೋಲಾರ ಗ್ರಾಮವು ಹೋಬಳಿ ಪ್ರದೇಶವಾಗಿದ್ದು, ಇಲ್ಲಿ ಹೊಸದಾಗಿ ಭೂಮಿ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ ಕೋಲಾರ ಗ್ರಾಮದಲ್ಲಿ ಅತೀ ಅವಶ್ಯಕವಾಗಿರತಕ್ಕಂತಹ ಭೂಮಿ ಕೇಂದ್ರವನ್ನು ಯಾವ ಕಾಲ ಮಿತಿಯೊಳಗೆ ತೆರೆಯಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಇಲ್ಲ

ಈ) ಅನ್ವಯಿಸುವುದಿಲ್ಲ